

# ಡಾ.ಎನ್.ಚಿನ್ನಸ್ವಾಮಿ ಸೋಸಲೆ
## ಸ್ವ–ವಿವರ

**ಹುಟ್ಟು** : ಮೈಸೂರು ಜಿಲ್ಲೆ ಟಿ. ನರಸೀಪುರ ತಾಲ್ಲೂಕಿನ **ಸೋಸಲೆ** ಗ್ರಾಮ (೧೯೬೮).

**ಶಿಕ್ಷಣ** : ಪ್ರಾಥಮಿಕ ಶಿಕ್ಷಣ ಸ್ವಗ್ರಾಮದಲ್ಲಿ, ಪ್ರೌಢ ಶಿಕ್ಷಣದಿಂದ ಮುಂದಿನ ಓದು ಮೈಸೂರಿನಲ್ಲಿ. ಆಧುನಿಕ ಮೈಸೂರು ಸಂಸ್ಥಾನದಲ್ಲಿ ಗ್ರಾಮೀಣಾಭಿವೃದ್ಧಿ (೧೮೮೧–೧೯೪೦) ಎಂಬ ವಿಷಯದಲ್ಲಿ ಪಿಎಚ್.ಡಿ.(೨೦೦೧, ಮೈಸೂರು ವಿಶ್ವವಿದ್ಯಾನಿಲಯ.)

**ವೃತ್ತಿ** : ಕನ್ನಡ ವಿಶ್ವವಿದ್ಯಾಲಯ, ಹಂಪಿಯ **ಚರಿತ್ರೆ** ವಿಭಾಗದಲ್ಲಿ **ಪ್ರಾಧ್ಯಾಪಕ**.

**ಅಧ್ಯಯನ ಕ್ಷೇತ್ರ** :

* ಆಧುನಿಕ ಮೈಸೂರಿನ ಒಡೆಯರ್ ಕಾಲದ ಚರಿತ್ರೆಯನ್ನು ಜನ ಮುಖಿ ಆಧಾರಿತ ಸಾಂಸ್ಕೃತಿಕ ಚರಿತ್ರೆ ಅಧ್ಯಯನ
* ಕರ್ನಾಟಕದ ದಲಿತರ ಮೇಲಿನ ದೌರ್ಜನ್ಯ ಹಾಗೂ ಅಮಾನವೀಯ ಆಚರಣೆಗಳ ಚರಿತ್ರೆ ಕುರಿತು ತಳಮಟ್ಟದ ವಿಸ್ತೃತ ಅಧ್ಯಯನ
* ಬಾಬಾ ಸಾಹೇಬ್ ಅಂಬೇಡ್ಕರ್ ಚಿಂತನೆಗಳನ್ನು ಪ್ರಸ್ತುತ ಸಂದರ್ಭದೊಂದಿಗೆ ಮುಖಾ–ಮುಖಿಗೊಳಿಸಿ ದಲಿತ ಸಂವೇದನೆಯ ಅಧ್ಯಯನ ಹಾಗೂ ಸಂಶೋಧನಾ ಬರವಣಿಗೆ ಮುಖ್ಯ ಆಸಕ್ತಿ ಕ್ಷೇತ್ರಗಳಾಗಿರುತ್ತವೆ.

**ಮಾರ್ಗದರ್ಶನ** : **ಆರು** ಪಿಎಚ್.ಡಿ. ಪದವಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಪೂರ್ಣಗೊಳಿಸಲಾಗಿದೆ.
**ಹದಿನೆಂಟು** ಎಂ.ಫಿಲ್. ಪದವಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿ ಪೂರ್ಣಗೊಳಿಸಲಾಗಿದೆ.

**ಪ್ರಕಟಿತ ಕೃತಿಗಳು (ಸ್ವತಂತ್ರ ಕೃತಿಗಳು)** : **ಏಕೀಕರಣೋತ್ತರ ಕರ್ನಾಟಕದಲ್ಲಿ ಗಡಿ ಚಳವಳಿ** (೧೯೯೯ ಪ್ರಸಾರಾಂಗ, ಕ.ವಿ.ವಿ.ಹಂಪಿ), **ನಮ್ಮ ಗ್ರಾಮಗಳು ಅಂದು-ಇಂದು**(೨೦೦೧ ಪ್ರಸಾರಾಂಗ, ಕ.ವಿ.ವಿ. ಹಂಪಿ), **ವಿಜಯನಗರ ಸಾಮ್ರಾಜ್ಯ ಮತ್ತು ಸಂಸ್ಥಾನ**(೨೦೦೩, ಪ್ರಸಾರಾಂಗ, ಕ.ವಿ.ವಿ, ಹಂಪಿ), **ನಾಲ್ವಡಿ ಕೃಷ್ಣನ ಮೈಸೂರು**(೨೦೦೪, ಪ್ರಸಾರಾಂಗ, ಕ.ವಿ.ವಿ, ಹಂಪಿ), **ಭಾರತೀಯ ಸಮಾಜ ಮತ್ತು ದಲಿತರು**(೨೦೦೬ ಪ್ರಸಾರಾಂಗ, ಕ.ವಿ.ವಿ.ಹಂಪಿ), **ದಲಿತರು ಮತ್ತು ಮತಾಂತರ: ಒಂದು ಚಿಂತನೆ**(೨೦೦೭, ಪ್ರಸಾರಾಂಗ, ಕ.ವಿ.ವಿ, ಹಂಪಿ), **ದಲಿತರ ಮೇಲೆ ದೌರ್ಜನ್ಯ: ಒಂದು ನೋಟ**(೨೦೦೭ ಪ್ರಸಾರಾಂಗ, ಕ.ವಿ.ವಿ.ಹಂಪಿ), **ಪ್ರಭುತ್ವ ಮತ್ತು ದಲಿತರು**(೨೦೦೬, ಕಸಾಪ, ಬೆಂಗಳೂರು), **ವಸಾಹತು ಕಾಲಘಟ್ಟದ ಮೈಸೂರು ಸಂಸ್ಥಾನ**(೨೦೦೯, ಪ್ರಸಾರಾಂಗ, ಕ.ವಿ.ವಿ, ಹಂಪಿ), **ಗಡಿಚಳವಳಿ: ಇತ್ತೀಚಿನ ಆಯಾಮಗಳು**(೨೦೧೦, ಪ್ರಸಾರಾಂಗ, ಕ.ವಿ.ವಿ, ಹಂಪಿ), **ದಲಿತರ ಬದುಕು-ಮೆಲುಕು**(೨೦೧೨, ಪ್ರಸಾರಾಂಗ, ಕ.ವಿ.ವಿ, ಹಂಪಿ), **ಕರ್ನಾಟಕ ಚರಿತ್ರೆ ಮತ್ತು ಸಾಹಿತ್ಯ**(೨೦೧೨ ಸಿ.ವಿ.ಜಿ.ಪಬ್ಲಿಕೇಶನ್, ಬೆಂಗಳೂರು), **ಅಂಬೇಡ್ಕರ್‌ವಾದ ಮತ್ತು ಪ್ರಸ್ತುತ ದಲಿತರು**(೨೦೧೨, ಸಪ್ನಬುಕ್ ಹೌಸ್, ಬೆಂಗಳೂರು), **ಅಂಬೇಡ್ಕರ್ ದೃಷ್ಟಿಯಲ್ಲಿ ದಲಿತರು ಮತ್ತು ಮತಾಂತರ**(೨೦೧೨ ಯಾಜಿ ಪ್ರಕಾಶನ, ಹೊಸಪೇಟೆ), **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು**(೨೦೧೩, ಪ್ರಸಾರಾಂಗ, ಕ.ವಿ.ವಿ.ಹಂಪಿ), **ದಲಿತರ ಮೇಲಿನ ದೌರ್ಜನ್ಯ ಮತ್ತು ಸಾಮಾಜಿಕ ನ್ಯಾಯದ ಪ್ರಶ್ನೆಗಳು**(೨೦೧೩, ಯಾಜಿ ಪ್ರಕಾಶನ, ಹೊಸಪೇಟೆ), **ದಲಿತ ಚರಿತ್ರೆ ರಚನೆಯಲ್ಲಿ ಕಾಡಲೇಬೇಕಾದ ಪ್ರಶ್ನೆಗಳು**(೨೦೧೫ ಗೀತಾಂಜಲಿ ಪ್ರಕಾಶನ, ಶಿವಮೊಗ್ಗ), **ಒನಕೆ ಓಬವ್ವೆ: ದಲಿತ ಸಂವೇದನೆಯೊಂದಿಗೆ ಮುಖಾ-ಮುಖಿ**(೨೦೧೬, ಗೌತಮ್ ಪ್ರಕಾಶನ, ಕಮಲಾಪುರ), **ದಲಿತ ಸಂವೇದನೆಯ ಸಂಶೋಧನೆ ಏಕೆ? ಹೇಗೆ?** (ಸಿದ್ಧತೆಯಲ್ಲಿದೆ)

ದಲಿತರ ಮೇಲಿನ ದೌರ್ಜನ್ಯ ಹಾಗೂ ಅಮಾನವೀಯ ಆಚರಣೆಗಳ ಕುರಿತ ನನ್ನ ಸಂಶೋಧನಾತ್ಮಕ ಬರವಣಿಗೆಯ ಕನ್ನಡದ **ದಲಿತರ ಬದುಕು-ಮೆಲುಕು** ಕೃತಿಯು **An objective study of inhuman practices and atrocities on dalits in Karnataka** ಎಂಬ ಹೆಸರಿನಲ್ಲಿ ದೆಹಲಿಯ ಪ್ರಕಾಶನದಿಂದ ಪ್ರಕಟಗೊಳ್ಳುತ್ತಿದೆ.

**ಸಂಪಾದಿತ ಕೃತಿಗಳು** : **ಹಂಪಿ ಅಂದು-ಇಂದು**(೨೦೦೬, ಪ್ರಸಾರಾಂಗ, ಕ.ವಿ.ವಿ, ಹಂಪಿ), **ಡಾ. ಬಿ.ಆರ್.ಅಂಬೇಡ್ಕರ್ ಮತ್ತು ಸಮಕಾಲೀನ ದಲಿತರು**(೨೦೦೯, ಪ್ರಸಾರಾಂಗ, ಕ.ವಿ.ವಿ, ಹಂಪಿ), **ಸಮಕಾಲೀನ ಕರ್ನಾಟಕ: ವಿವಿಧ ಆಯಾಮಗಳು**(೨೦೧೦ ಪ್ರಸಾರಾಂಗ, ಕ.ವಿ.ವಿ, ಹಂಪಿ), **ಸಮಕಾಲೀನ ಆಫ್ರಿಕಾ: ವಿವಿಧ ಆಯಾಮಗಳು** (೨೦೧೦, ಪ್ರಸಾರಾಂಗ, ಕ.ವಿ.ವಿ, ಹಂಪಿ), **ಬಾದಾಮಿ ಚಾಲುಕ್ಯರು: ಆಯ್ದ ಲೇಖನ ಸಂಪುಟ**(೨೦೦೯, ಪ್ರಸಾರಾಂಗ, ಕ.ವಿ.ವಿ, ಹಂಪಿ), **ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ**(೨೦೧೧, ಪ್ರಸಾರಾಂಗ, ಕ.ವಿ.ವಿ, ಹಂಪಿ),

**ಕರ್ನಾಟಕದಲ್ಲಿ ಶ್ವೇತಾಂಬರ ಜೈನ ಸಮಾಜ: ಸಾಂಸ್ಕೃತಿಕ ಅಧ್ಯಯನ**(೨೦೧೨ ಪ್ರಸಾರಾಂಗ, ಕ.ವಿ.ವಿ, ಹಂಪಿ), **ಕರಾವಳಿ ಕರ್ನಾಟಕದ ಜೈನ ಅರಸುಮನೆತನಗಳು: ಸಾಂಸ್ಕೃತಿಕ ಅಧ್ಯಯನ**(೨೦೧೪, ಪ್ರಸಾರಾಂಗ, ಕ.ವಿ.ವಿ, ಹಂಪಿ), ರಚನೆ–ಸಂಪಾದನೆ: **ಜಯಚಾಮ ರಾಜೇಂದ್ರ ಒಡೆಯರ್ ಕಾಲದ ಮೈಸೂರು ಸಂಸ್ಥಾನ**(೨೦೧೬, ಸುಂದರ ಪ್ರಕಾಶನ, ಬೆಂಗಳೂರು), **ಜೈನಧರ್ಮದಲ್ಲಿ ಯಕ್ಷ–ಯಕ್ಷಿಯರು: ಪ್ರೇರಣೆ ಮತ್ತು ಪರಿಕಲ್ಪನೆ** (೨೦೧೫, ಪ್ರಸಾರಾಂಗ, ಕ.ವಿ.ವಿ, ಹಂಪಿ), ರಚನೆ–ಸಂಪಾದನೆ: **ಕರ್ನಾಟಕದ ಸಮಗ್ರ ದಲಿತ ಚರಿತ್ರೆ**(೨೦೧೬, ನವಕರ್ನಾಟಕ ಪ್ರಕಾಶನ, ಬೆಂಗಳೂರು), ರಚನೆ–ಸಂಪಾದನೆ: **ಕನ್ನಡ ನೆಲದಲ್ಲಿ ಸ್ವಾಮಿ ವಿವೇಕಾನಂದ**(೨೦೧೭, ಪ್ರಸಾರಾಂಗ, ಕ.ವಿ.ವಿ, ಹಂಪಿ), **ಪ್ರಾಚೀನ ಜೈನ ಮಹಾಕಾವ್ಯಗಳಲ್ಲಿ ಚಾರಿತ್ರಿಕ ಪ್ರಜ್ಞೆ** (೨೦೧೭, ಪ್ರಸಾರಾಂಗ, ಕ.ವಿ.ವಿ.ಹಂಪಿ), **ಧೀಮಂತ** (ಕ್ರಾಂತಿಕಾರಿ ಬಿ. ಬಸವಲಿಂಗಪ್ಪನವರ ಸಂಸ್ಮರಣ ಸಂಪುಟ), ರಚನೆ–ಸಂಪಾದನೆ: **ಕನ್ನಡ ನೆಲದಲ್ಲಿ ಬೌದ್ಧಧರ್ಮ** (ಮುದ್ರಣದಲ್ಲಿದೆ), **ಚರಿತ್ರೆ ಅಧ್ಯಯನ** ಸಂಪುಟ–೯, ಸಂಚಿಕೆ–೧–೨(೨೦೧೬–೧೭, ಪ್ರಸಾರಾಂಗ, ಕ.ವಿ.ವಿ, ಹಂಪಿ)

**ಸಂಶೋಧನಾತ್ಮಕ ಪ್ರಕಟಿತ ಕೃತಿಗಳಿಗೆ ಸಂದ ಗೌರವ/ಪ್ರಶಸ್ತಿಗಳು**

**೧. ಪುಸ್ತಕ ವಿಮರ್ಶಾ ಪ್ರಶಸ್ತಿ** : ೨೦೦೮ರಲ್ಲಿ ಪ್ರಕಟಗೊಂಡ **ಭಾರತೀಯ ಸಮಾಜ ಮತ್ತು ದಲಿತರು** ಎಂಬ ಕೃತಿಗೆ ಅಖಿಲ ಭಾರತ ದಲಿತ ಸಾಹಿತ್ಯ ಪರಿಷತ್ ಉತ್ತಮ ವಿಮರ್ಶಾ ಕೃತಿ ಎಂಬ ಪ್ರಶಸ್ತಿ ನೀಡಿ ಗೌರವ ಸಮರ್ಪಣೆ.
ಪ್ರಕಟಣೆ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**೨. ಪುಸ್ತಕ ಪ್ರಶಸ್ತಿ** : ೨೦೦೯ರಲ್ಲಿ ಪ್ರಕಟಗೊಂಡ **ದಲಿತರು ಮತ್ತು ಮತಾಂತರ: ಒಂದು ಚಿಂತನೆ** ಎಂಬ ಕೃತಿಗೆ **ಗೌತಮಬುದ್ಧ ಪ್ರಶಸ್ತಿ,** ಸ್ಫೂರ್ತಿಧಾಮ, ಬೆಂಗಳೂರು.
ಪ್ರಕಟಣೆ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**೩. ಪುಸ್ತಕ ಪ್ರಶಸ್ತಿ** : ೨೦೦೪ರಲ್ಲಿ ಪ್ರಕಟಗೊಂಡ **ನಾಲ್ವಡಿ ಕೃಷ್ಣನ ಮೈಸೂರು** ಹಾಗೂ ೨೦೧೩ರಲ್ಲಿ ಪ್ರಕಟಗೊಂಡ **ನಾಲ್ವಡಿ ಕೃಷ್ಣರಾಜ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು** ಎಂಬ ಕೃತಿಗಳಿಗೆ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಷ್ಠಾನ ಕೊಡಮಾಡುವ **ಉತ್ತಮ ಪುಸ್ತಕ ಪ್ರಶಸ್ತಿ**ಗಳು ಲಭಿಸಿವೆ.
ಪ್ರಕಟಣೆ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**೪. ಅತ್ಯುತ್ತಮ ಪುಸ್ತಕ ಪ್ರಶಸ್ತಿಗಳು** : ೨೦೧೨ರಲ್ಲಿ ಪ್ರಕಟಗೊಂಡ **ದಲಿತರ ಬದುಕು– ಮೆಲುಕು** ಎಂಬ ಕೃತಿಗೆ
* ದಲಿತ ಸಾಹಿತ್ಯ ಪರಿಷತ್‌ನಿಂದ **ಉತ್ತಮ ಸಂಶೋಧನಾತ್ಮಕ ಕೃತಿ ಪ್ರಶಸ್ತಿ**
* ಕನ್ನಡ ಸಾಹಿತ್ಯ ಪರಿಷತ್ ದಲಿತ ಸಾಹಿತಿಗಳಿಗೆ ಕೊಡ ಮಾಡುವ **ಪ್ರೊ. ಎಲ್. ಬಸವರಾಜ ಪ್ರಶಸ್ತಿ**
* ಬೆಳಗಾವಿ ಮತ್ತು ಕೋಲಾರ ಜಿಲ್ಲಾ ದಲಿತ ಸಂಘಟನೆಗಳು ಕೊಡಮಾಡುವ **ಅಂಬೇಡ್ಕರ್ ಪ್ರಶಸ್ತಿ**ಗಳಿಗೆ ಈ ಕೃತಿ ಭಾಜನವಾಗಿದೆ.

**೫. ಅಖಿಲ ಭಾರತ ದಲಿತ ಸಾಹಿತ್ಯ ಪರಿಷತ್‌ನ ಗೌರವ ಪ್ರಶಸ್ತಿ** : ಕರ್ನಾಟಕದ ದಲಿತರ ಮೇಲಿನ ದೌರ್ಜನ್ಯ ಹಾಗೂ ಅಮಾನವೀಯ

ಆಚರಣೆಗಳ ಕುರಿತು ನನ್ನ ತಳ ಸ್ಪರ್ಷೀಯ ಸಂಶೋಧನಾತ್ಮಕ ಅಧ್ಯಯನ ಹಾಗೂ ಅಂಬೇಡ್ಕರ್ ಚಿಂತನೆಯ ಹಿನ್ನೆಲೆಯಲ್ಲಿ ರಚಿಸಿದ ಕ್ಷೇತ್ರಕಾರ್ಯಾಧಾರಿತ ಸಂಶೋಧನಾತ್ಮಕ ಸಮಗ್ರ ಸಾಹಿತ್ಯ ಸೇವೆಯನ್ನು ಪರಿಗಣಿಸಿ, ಕರ್ನಾಟಕ ರಾಜ್ಯ ದಲಿತ ಸಾಹಿತ್ಯ ಪರಿಷತ್(ರಿ) ಅವರು ೨೦೧೪ರ ಸಾಲಿನಲ್ಲಿ ಅತ್ಯುನ್ನತವಾದ **ಗೌರವ ಪ್ರಶಸ್ತಿ**ಯನ್ನು ನೀಡಿ ಸನ್ಮಾನಿಸಿದೆ (ದಲಿತ ಸಾಹಿತ್ಯ ಪರಿಷತ್, ಗದಗ, ಕರ್ನಾಟಕ).

೬. ಕೆ. ಸಿಂಗಾರಿಗೌಡ ಪ್ರಶಸ್ತಿ : **ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದ ಮೈಸೂರು ಸಂಸ್ಥಾನದಲ್ಲಿ ದಲಿತರು** ಎಂಬ ಸಂಶೋಧನಾತ್ಮಕ ಕೃತಿ ಹಾಗೂ ಮೈಸೂರು ಒಡೆಯರ ಕುರಿತು ನಾನು ರಚಿಸಿದ ಸಮಗ್ರ ಸಂಶೋಧನಾತ್ಮಕ ಬರವಣಿಗೆಯನ್ನು ಪರಿಗಣಿಸಿ ಮಂಡ್ಯದ ಪ್ರತಿಷ್ಠಿತ ಕರ್ನಾಟಕ ಸಂಘವು ಕೊಡಮಾಡುವ **ಶ್ರೀ ಕೆ. ಸಿಂಗಾರಿಗೌಡ ಪುಸ್ತಕ ಪ್ರಶಸ್ತಿ** ನೀಡಿ ಗೌರವಿಸಿದೆ.

೭. ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಪುಸ್ತಕ ಪ್ರಶಸ್ತಿ: **ಆಧುನಿಕ ಮೈಸೂರು ಚರಿತ್ರೆಗೆ ಸಂಬಂಧಿಸಿದಂತೆ ನನ್ನ** ಸಂಶೋಧನಾತ್ಮಕ ರಚನೆ ಹಾಗೂ ಸಂಪಾದಕತ್ವದಲ್ಲಿ ಪ್ರಕಟಗೊಂಡ ರಚಿಸಿದ **ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್ ಕಾಲದ ಮೈಸೂರು ಸಂಸ್ಥಾನ** ಹಾಗೂ **ಜಯಚಾಮರಾಜೇಂದ್ರ ಒಡೆಯರ ಕಾಲದ ಮೈಸೂರು ಸಂಸ್ಥಾನ** ಎಂಬ ಮಹತ್ವದ ರಚನೆ–ಸಂಪಾದನೆ ಪುಸ್ತಕಗಳಿಗೆ ಮಂಡ್ಯ ನಗರದ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರತಿಷ್ಠಾನ ಸಂಸ್ಥೆಯವರು ಕೊಡಮಾಡುವ **ಅತ್ಯುತ್ತಮ ಸಂಶೋಧನಾ ಪುಸ್ತಕ ಪ್ರಶಸ್ತಿ** ನೀಡಿ ಗೌರವಿಸಿದೆ.

೮. **ಗುಲ್ಬಾರ್ಗ ವಿಶ್ವವಿದ್ಯಾಲಯದ ಕೊಡಮಾಡುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ** : ಗುಲ್ಬಾರ್ಗ ವಿಶ್ವವಿದ್ಯಾಲಯದ ಪ್ರಸಾರಾಂಗವು ಕೊಡಮಾಡುವ ಕರ್ನಾಟಕ ರಾಜ್ಯೋತ್ಸವ ಪುಸ್ತಕ ಪ್ರಶಸ್ತಿಯನ್ನು ೨೦೧೬ನೇ ಸಾಲಿನಲ್ಲಿ ನನ್ನ **ದಲಿತ ಚರಿತ್ರೆ ರಚನೆಯಲ್ಲಿ ಕಾಡಲೇಬೇಕದ ಪ್ರಶ್ನೆಗಳು** ಎಂಬ ವಿಮರ್ಶಾತ್ಮಕ ಕೃತಿಗೆ ಪ್ರಶಸ್ತಿ ನೀಡಿ ಗೌರವಿಸಿದೆ.

೯. **ಕ್ರಾಂತಿಕಾರಿ ಬಿ. ಬಸವಲಿಂಗಪ್ಪ ಸಂಘಟನಾ ಪ್ರಶಸ್ತಿ** : ಕ್ರಾಂತಿಕಾರಿ ಬಿ. ಬಸವಲಿಂಗಪ್ಪ ಜಯಂತಿ ಆಚರಣಾ ಸಮಿತಿಯವರು ಉತ್ತಮ ಸಂಘಟನಕಾರರಿಗೆ ಕೊಡಮಾಡುವ **ಕ್ರಾಂತಿಕಾರಿ ಬಿ.ಬಸವಲಿಂಗಪ್ಪ ಸಂಘಟನಾ ಪ್ರಶಸ್ತಿ** ನೀಡಿ ಗೌರವಿಸಿದೆ.

೧೦. **ಮಹಾತ್ಮ ಜ್ಯೋತಿಭಾ ಫುಲೆ ಪ್ರಶಸ್ತಿ:** ಕರ್ನಾಟಕದ ದಲಿತರ ಮೇಲಿನ ದೌರ್ಜನ್ಯ ಹಾಗೂ ಅಮಾನವೀಯ ಆಚರಣೆಗಳ ಕುರಿತು ನನ್ನ ತಳ ಸ್ಪರ್ಷೀಯ ಸಂಶೋಧನಾತ್ಮಕ ಅಧ್ಯಯನ ಹಾಗೂ ಅಂಬೇಡ್ಕರ್ ಚಿಂತನೆಯ ಹಿನ್ನೆಲೆಯಲ್ಲಿ ರಚಿಸಿದ ಕ್ಷೇತ್ರಕಾರ್ಯಾಧಾರಿತ ಸಂಶೋಧನಾತ್ಮಕ ಸಮಗ್ರ ಸಾಹಿತ್ಯ ಸೇವೆಯನ್ನು ಪರಿಗಣಿಸಿ, ಕರ್ನಾಟಕ ರಾಜ್ಯ ಮಾನವ ಬಂಧುತ್ವ ವೇದಿಕೆ, ಕೊಪ್ಪಳ ಅವರು ೨೦೧೨ರ ಸಾಲಿನಲ್ಲಿ ಅತ್ಯುನ್ನತವಾದ **ಮಹಾತ್ಮ ಜ್ಯೋತಿಭಾ ಫುಲೆ ಪ್ರಶಸ್ತಿ**ಯನ್ನು ನೀಡಿ ಸನ್ಮಾನಿಸಿದೆ.

**೧೧.ರಾಷ್ಟ್ರೀಯ ಶಿಕ್ಷಣ ರತ್ನ ರಾಷ್ಟ್ರ ಪ್ರಶಸ್ತಿ:** ಭಾರತ ರತ್ನ ಸರ್.ಎಂ.ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಪ್ರತಿಷ್ಠಾನ ಟ್ರಸ್ಟ್(ರಿ)ಬೆಂಗಳೂರು. **ಅವರು** ನನ್ನ ದಲಿತ ಸಂಶೋಧನೆಯನ್ನು ಗುರಿತಿಸಿ **.ರಾಷ್ಟ್ರೀಯ ಶಿಕ್ಷಣ ರತ್ನ ರಾಷ್ಟ್ರ** ಪ್ರಶಸ್ತಿ ನೀಡಿ ಗೌರವಿಸಿದೆ

* * *

೮೧ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಶ್ರವಣಬೆಳ್ಗೊಳದಲ್ಲಿ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೀವನ ಮತ್ತು ಸಾಧನೆ ಕುರಿತು ಮುಖ್ಯ ವೇದಿಕೆಯಲ್ಲಿ ವಿಶೇಷ ಉಪನ್ಯಾಸ ನೀಡಲಾಗಿದೆ.

- ೮೨ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ರಾಯಚೂರಿನಲ್ಲಿ ದಲಿತ ಸಾಹಿತ್ಯಕ್ಕೆ ಪ್ರೇರಣೆ ಮತ್ತು ಪ್ರಭಾವ ಎಂಬ ವಿಷಯ ಕುರಿತು ಮುಖ್ಯ ವೇದಿಕೆಯಲ್ಲಿ ವಿಶೇಷ ಉಪನ್ಯಾಸ ನೀಡಲಾಗಿದೆ.
- ಸಾಹಿತ್ಯ ಪರಿಷತ್‌ನವರು ಚಾಮರಾಜ ನಗರದಲ್ಲಿ ಹಮ್ಮಿಕೊಂಡಿದ್ದ ದಲಿತ ಸಾಹಿತ್ಯ ಸಮಾವೇಶದಲ್ಲಿ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಜೀವನ ಮತ್ತು ಸಾಧನೆ ಕುರಿತು ಮುಖ್ಯ ವೇದಿಕೆಯಲ್ಲಿ ವಿಶೇಷ ಉಪನ್ಯಾಸ ನೀಡಲಾಗಿದೆ.
- ಕನ್ನಡ ಪುಸ್ತಕ ಪ್ರಾಧಿಕಾರವು ದಲಿತ ಸಾಹಿತ್ಯ ಕುರಿತು ಕೋಲಾರ, ಮೈಸೂರು, ಮಂಡ್ಯ, ದೊಡ್ಡಬಳ್ಳಾಪುರ, ಬೆಂಗಳೂರು ಸಾಹಿತ್ಯ ಸಮ್ಮೇಳನಗಳಲ್ಲಿ ವಿಶೇಷ ಉಪನ್ಯಾಸ ಹಾಗೂ ಗೋಷ್ಠಿಗಳ ಅಧ್ಯಕ್ಷತೆಯನ್ನು ನಿರ್ವಹಿಸಲಾಗಿದೆ.
- ಹತ್ತಾರು ಸ್ಥಳೀಯ, ರಾಜ್ಯ, ರಾಷ್ಟ್ರೀಯ ಸಂಘಸಂಸ್ಥೆಗಳಲ್ಲಿ ಹಾಗೂ ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ ಸಮಾಜಮುಖಿ ಚಿಂತಕರ ಜಯಂತಿ ಗಳಂದು ವಿದ್ವಾಂಸರಾಗಿ ಭಾಗವಹಿಸಿ ನನ್ನ ಅಧ್ಯಯನ ಕ್ಷೇತ್ರದ ವಿಷಯದಲ್ಲಿ ವಿಶೇಷ ಉಪನ್ಯಾಸ ನೀಡಲಾಗಿದೆ ಹಾಗೂ ಇವರುಗಳ ಸನ್ಮಾನಕ್ಕೂ ಭಾಜನವಾಗಲಾಗಿದೆ.
- ಕರ್ನಾಟಕ ರಾಜ್ಯದ ಅನೇಕ ಜಿಲ್ಲಾಡಳಿತಗಳ ಕರೆಯ ಮೇಲೆ ವಿವಿಧ ಸ್ಥಳಗಳಲ್ಲಿ ದಲಿತರ ಮೇಲಿನ ದೌರ್ಜನ್ಯ ಕುರಿತ ವಿಷಯದಲ್ಲಿ ಅರಿವು ಮೂಡಿಸುವ ಹಿನ್ನೆಲೆಯಲ್ಲಿ ಹಾಗೂ ಅಮಾನವೀಯ ಆಚರಣೆಗಳ ನಿರ್ಮೂಲನೆಗೆ ಸಂಬಂಧಿಸಿದಂತೆ ಸಂಪನ್ಮೂಲ ವ್ಯಕ್ತಿಯಾಗಿ ವಿಶೇಷ ಉಪನ್ಯಾಸಗಳನ್ನು ಹಾಗೂ ಕಮ್ಮಟಗಳನ್ನು ಏರ್ಪಡಿಸಲಾಗಿದೆ.